ಮರೆತೇಹೋಯಿತು.

★★★

ಮರುದಿನ ಮಧ್ಯಾಹ್ನ, ಅದರ ಮರುದಿನದ ಬಸ್ಸಿಗೆ ರಿಜರ್ವೇಶನ್ ಮಾಡಿಸಲಿಕ್ಕೆಂದು ಗೌರಿಯೊಂದಿಗೆ ಸುಭಾಸನಗರದ ಬಸ್‌ನಿಲ್ದಾಣಕ್ಕೆ ಹೊರಟಿದ್ದೆ. ದಾರಿಯಲ್ಲಿ ರಸ್ತೆಯ ಅಂಚಿನಲ್ಲಿ ಬೀದಿಯ ಮಾರಾಟಗಾರರು ರಾಶಿ–ರಾಶಿ ಕಿತ್ತಳೆಹಣ್ಣುಗಳನ್ನು ಹಾಕಿಕೊಂಡು ಕುಳಿತಿದ್ದರು. ಕಣ್ಣು ಸೆಳೆಯುವ ಬಣ್ಣದ ಹಣ್ಣುಗಳು. ಅಷ್ಟೇ ಮನ ಸೆಳೆಯುವ ಮಾರಾಟಗಾರರ ಬಣ್ಣದ ಮಾತುಗಳು. ಬೆಲೆ ಮಾತ್ರ ಸ್ವಲ್ಪ ಹೆಚ್ಚು ಎಂದು ತೋರಿತು. ಗೌರಿ ಹಣ್ಣಿಗೆ ಆಶೆಪಟ್ಟಳು. ನನಗೂ ಕೊಳ್ಳಬೇಕೆನಿಸಿತು, ಆದರೆ ಇಲ್ಲಿಯ ವ್ಯಾಪಾರವೆಲ್ಲ ಬರೀ ಮೋಸದ್ದು ಎಂದು ಹಲವು ಸಲ ಅನುಭವಕ್ಕೆ ಬಂದಿತ್ತು. ಮತ್ತೆ ಬೇರೆ ಕಡೆ ನೋಡೋಣ ಎಂದುಕೊಂಡು ಸುಮ್ಮನೇ ಮುಂದಕ್ಕೆ ಬಂದೆ.

ನಿಲ್ದಾಣಕ್ಕೆ ಬಂದಾಗ ನಮ್ಮ ಊರಿಗೆ ಸಂಬಂಧಿಸಿದ ಕೌಂಟರಿನ ಕಿಡಕಿ ಮುಚ್ಚಿಕೊಂಡಿತ್ತು. ಕಾರಕೂನ ಎಲ್ಲಿಗೋ ಹೋಗಿದ್ದ. ವಿಚಾರಿಸಿದಾಗ 'ಐದು ನಿಮಿಷ ತಾಳಿ, ಕಾಫೀಗೆ ಹೋಗಿದಾರೆ. ಈಗ ಬಂದ್ಬಿಡ್ತಾರೆ' ಎಂದ ಪಕ್ಕದ ಕೌಂಟರಿನಾತ. ಇಬ್ಬರೂ ಹೋಗಿ ಎದುರಿನ ಕಲ್ಲುಬೆಂಚಿನ ಮೇಲೆ ಕುಳಿತುಕೊಂಡೆವು. ಅಷ್ಟರಲ್ಲಿ 'ನಮಸ್ಕಾರ್ರಿ ಸಾಹೇಬರ' ಎಂದು ಯಾರೋ ಎದುರಿಗೆ ಬಂದು ನಿಂತರು. ನೋಡಿದರೆ, ನಿನ್ನೆ ದೇಶಪಾಂಡೇನ ಜೊತೆಯಲ್ಲಿ ಕಂಡಿದ್ದ ಮುದುಕರು. ಅವರ ನಿಲುವಿನಲ್ಲಿ ಒಂದು ಬಗೆಯ ದೈನ್ಯ ಇತ್ತು; ದನಿಯಲ್ಲಿ ಸ್ವಲ್ಪ ಅಸಹಜವಾಗಿ ಕಂಡ ಗೌರವವಿತ್ತು. ಅವರನ್ನು ನೋಡಿದೊಡನೆ, ದೇಶಪಾಂಡೇನೂ ಇಲ್ಲೇ ಎಲ್ಲಾದರೂ ಬಂದಿದ್ದಾನೇನೋ ಎಂದು ಅನುಮಾನವಾಗಿ ಮನಸ್ಸು ಹುಳ್ಳುಳ್ಳಗಾಯಿತು. ಆದರೆ ದೇಶಪಾಂಡೆ ಅಲ್ಲೆಲ್ಲೂ ಕಾಣಲಿಲ್ಲ.

'ನಿನ್ನೆ ಮದ್ಯಾನ ಮೂರು ಗಂಟೇಕ್ಕ ನಿಮ್ಮ ಲಾಜಿಂಗಿಗೆ ಬಂದಿದ್ದಿವಿ. ದಾರೀ ನೋಡಿ ನೋಡಿ ಸಾಕಾಗಿ ಐದರ ಮ್ಯಾಲ ತಿರಿಗಿ ಹ್ವಾದಿವಿ' ಎನ್ನುತ್ತ ಮುದುಕರು ನನಗೆ ಎದುರಾಗಿ, ನನ್ನ ಹಾಗೂ ಗೌರಿಯ ನಡುವೆ ತಮ್ಮ ಕೈಚೀಲ ಸಮೇತ ಕುಳಿತುಕೊಂಡರು.

'ಅದು ಮೀಟಿಂಗು ಲಗೂ ಮುಗೀಲೇ ಇಲ್ಲ ನೋಡ್ರಿ. ಮಧ್ಯಾಹ್ನಕ್ಕ ಮತ್ತೊಂದು ಸಲ ಕೂಡಬೇಕಾತು. ಹೀಂಗಾಗಿ ಸಂಜೀತನಕಾ ಅದೇ ಆಗಿಬಿಟ್ಟಿತು' ಎಂದು ಒಂದು ಸುಳ್ಳು ಹೇಳಿದೆ.

'ನಿಮ್ಮ ಬಗ್ಗೆ ದೇಶಪಾಂಡೆ ಬಾಳ ಹೇಳಿದರು.'

'ಅಂದಂಗ, ದೇಶಪಾಂಡೆ ಎಲ್ಲದಾನ?'

'ಮತ್ತ ಯಾರನರ ನೋಡಲಿಕ್ಕೆ ಹೋಗಿರಬೇಕು, ನನ್ನ ಗೆಳೆಯನ ಮಗಾ, ಒಳ್ಳೇ ಹುಡುಗ. ಬಾಳ ಹಚಿಗೋತಾನ, ನಿನ್ನೆ ಅಕಸ್ಮಾತ್ ಸಿಕ್ಕ, ಪೂರಾದಿನ ಕೂಡೇ ಇದ್ದಿವಿ. ನಿನ್ನೆ ನಿಮ್ಮ ಲಾಂಜಿಂಗಿನಿಂದ ಹೋದ ಮ್ಯಾಲ ಮತ್ತ ಭೆಟ್ಟೀ ಆಗಿಲ್ಲ... ಅದs... ಕೇಳಿ ಬಾಳ ಸಂತೋಷಾತು. ಇಷ್ಟು ಸಣ್ಣ ವಯಸ್ಸಿನಾಗ ಇಷ್ಟೆಲ್ಲಾ ಸಾಧಿಸೀರಿ ಅಂದರೆ ಕಮಾಲ ಐತಿ ಬಿಡ್ರಿ. ದೇಶಪಾಂಡೆ ಹೇಳತಿದ್ದ– ನೀವು ಬಾಳ ಚಂದ ಕಲಸತಿದ್ದಿರಂತ. ನಾಟಕಾ ಕಲಸೂದರಾಗೂ ಹಂಗs ಅಂತ; ನಿಮ್ಮ ಬರವಣಿಗಿ, ನಿಮ್ಮ ಕಥೆ ಸಿನಿಮಾ ಆದದ್ದು... ನಾನೂ ನಿಮ್ಮ ಹೆಸರು ಬಾಳ ಕೇಳಿದ್ದೆ. ನಿನ್ನೆ ನೀವು ಹ್ವಾದಮ್ಯಾಲ ನಿಮ್ಮ ಹೆಸರು ಗೊತ್ತಾತು. ನಿಮ್ಮನ್ನ ಮಾತಾಡಿಸಬೇಕು ಅಂತ ಆಸೇ ಆತು. ಅದಕ್ಕ ನಿನ್ನೆ ಊರಿಗೆ ಹೋಗೂದು ಬಿಟ್ಟು ನಿಮ್ಮ ಲಾಜಿಂಗಿಗೆ ಬಂದಿದ್ದೆ. ಇವತ್ತರ ನಿಮ್ಮ ಭೆಟ್ಟೀ ಆದದ್ದು ಬಾಳ ಸಂತೋಷ. ದೇಶಪಾಂಡೆ...'